# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/1199/2017/ಎಆರ್‌ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 24/08/2021.

## ವಿಚಾರಣಾ ವರದಿ

**ಉಪಸ್ಥಿತರು:** ಜಗದೀಶ್ವರ ಎಂ, (ಪ್ರಭಾರ) ಅಪರ ನಿಬಂಧಕರು ವಿಚಾರಣೆಗಳು-13, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** 1. ಶ್ರೀ. ಮಹೇಶ್ ಬಿ. ನಿಡುಸೊಶಿ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತಿ, ಕನಕಗಿರಿ, ಕೊಪ್ಪಳ ಜಿಲ್ಲೆ ಮತ್ತು

2. ಶ್ರೀ ಸಿದ್ದಪ್ಪ, ಕಿರಿಯ ಅಭಿಯಂತರರು, ಪಟ್ಟಣ ಪಂಚಾಯತಿ, ಕನಕಗಿರಿ, ಕೊಪ್ಪಳ ಜಿಲ್ಲೆ ರವರುಗಳ ವಿರುದ್ದ ದಾಖಲಾಗಿರುವ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-9100/2017/ ಎ.ಆರ್.ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 09/08/2017.

2. ಸರ್ಕಾರದ ಆದೇಶ ಸಂಖ್ಯೆ:ನಅಇ 127 ಡಿಎಂಕೆ 2017, ದಿನಾಂಕ: 05/12/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ-1199/2017, ಬೆಂಗಳೂರು, ದಿನಾಂಕ: 28/12/2017.

* * * *

1. ದೂರುದಾರರಾದ ಶ್ರೀ. ರಾಜೇಶ್ ಬಿನ್ ಮಂಗಳೇಶಪ್ಪ ಚಿನ್ನೂರು, ವಾರ್ಡ್ ನಂ.12. ವಡ್ಡರ ಓಣಿ, ಕನಕಗಿರಿ ಗ್ರಾಮ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು 2015-16 ಮತ್ತು 2016-17 ನೇ ಸಾಲಿನಲ್ಲಿ ಪಟ್ಟಣ ಪಂಚಾಯತಿ ಕನಕಗಿರಿ ವ್ಯಾಪ್ತಿಯಲ್ಲಿನ ದೇವರಗದ್ದುಗೆ ಸ್ಥಳದಲ್ಲಿ ಕೈಗೊಳ್ಳಲಾದ ವಾಟರ್ ಟ್ಯಾಂಕ್ ಕಾಮಗಾರಿಗೆ ರೂ.20.00 ಲಕ್ಷಗಳನ್ನು ಖರ್ಚು ಮಾಡಿರುವುದಾಗಿ ಪುರಸಭೆಯ ಲೆಕ್ಕದಲ್ಲಿ ತಿಳಿಸಿರುತ್ತಾರೆ. ಆದರೆ ಸದರಿ ಕಾಮಗಾರಿಗೆ ರೂ.4.00 ರಿಂದ 5.00 ಲಕ್ಷ ಮಾತ್ರ ಬಳಕೆಯಾಗಿದ್ದು, ಉಳಿದ ಮೊತ್ತವನ್ನು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ದುರುಪಯೋಗಪಡಿಸಿಕೊಂಡಿರುತ್ತಾರೆಂದು ದೂರು ನೀಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 05/12/2017 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ:28/12/2017 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ–1 ಮತ್ತು 2 ರವರುಗಳಿಗೆ ದಿನಾಂಕ: 16/01/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ANNEXURE NO-1**
**CHARGE**

4. That, you-DGO No.1/ Sri. Mahesha B. Nidusoshi, Chief Officer, Pattana Panchayath, Kanakagiri, Koppal District and 2) you-DGONo-2/Sri. Siddappa, Junior Engineer, Pattana Panchayath, Kanakagiri, Koppal District, have committed the following misconduct:-

i) In the estimate, an amount of Rs.15 lakhs has been sanctioned for pipeline work from Lakshmidevi lake up to throne of Swamy near water tank. In the estimate, in respect of work item No.2 that is providing and installing PVC pipes at site etc., 110 mm pipes at the rate of Rs.332/- and 90 mm pipes at the rate of Rs.204/- has been sanctioned. But in the M.B. for the second item of work 140 mm pipes at the rate of Rs.481/- have been used which is not in accordance with the estimate and excess amount has been paid for the said pipes. The difference in excess rate paid that is at the rate of

Rs.149/- for 140 mm pipes for 2394 mtrs amounts to Rs.3,49,524/-.

ii) In the estimate, an amount of Rs.5 lakhs has been sanctioned for drilling four borewells and fixing motors near Lakshmidevi lake. In the estimate, in respect of work item-1, sinking of borewell, the total quantity mentioned is 106, but in the M.B. the total quantity mentioned is 200+174. Therefore, the excess amount paid is Rs.1,07,730/- (Rs.150x137=55,650+124x420=52080).

Thereby you-DGO Nos.1 and 2 being a Government Servants have failed to maintain absolute integrity and devotion to the duty, the act which was unbecoming of a Government Servants and thereby committed misconduct as enumerated U/R 3(1)(i) to (iii) of Karnataka Civil Service (Conduct) Rules 1966.

**ANNEXURE NO-II**

**STATEMENT OF IMPUTATIONS OF MISCONDUCT**

5. On the basis of a complaint filed by Sri. Rajesha S/o Mangaleshappa Chinnur r/o Ward No.12, Vaddar Oni,

Kanakagiri Village, Gangavathi Taluk, Koppal District (herein after referred to as 'complainant' for short), against you-DGOs, an investigation was taken up U/sec. 9 of the Karnataka Lokayukta Act 1984, by invoking powers vested u/sec.7(2) of the said Act.

6. **The brief facts of the complainant's are that:**

The complainant alleges that during 2015-2016 and 2016-2017 an amount of Rs.20 lakhs has been spent for the work of constructing water tank in the land of Swamy in order to provide water to the said tank from Lakshmidevi Lake, but only Rs.4 to 5 lakhs has been spent for the work and remaining amount has been misappropriated by you-DGOs by creating bogus documents.

7. You-DGO No-1 has submitted comments stating that, during 2005-2016 and 2016-17 SFC drinking water scheme has been provided to Kanakagiri Town Panchayath Deputy Commissioner has accorded sanction on 21/02/2016 in respect of two works under revised action plan. Estimate has been prepared by the Junior Engineer

for the said works and the A.E.E, DUDC has countersigned the estimate and D.C. has accorded administrative sanction. The first work sanctioned is drilling of four borewells and fixing motors for the said borewells near Lakshmidevi lake at an estimated cost of Rs.5 lakhs. This work has been entrusted to Contractor Srikanth who had quoted the lowest price and the contractor has executed the work and the work has been inspected by 3rd party. The second work sanctioned is pipeline work from Lakshmidevi lake up to throne of Swamy (Gadduge) near water tank. Said work was entrusted to Contractor Srikanth as the rate quoted by him was lowest and he has executed the work and the work has been is inspected by 3rd party and work is executed satisfactory.

8. Comments submitted by You-DGO No-2 are same as that of DGO No-1.

9. The estimates and M.B. produced by you-DGOs show that:

i) In the estimate, an amount of Rs.15 lakhs has been sanctioned for pipeline work from Lakshmidevi lake up to throne of Swamy near water tank. In the estimate, in respect of work item No.2 that is providing and installing PVC pipes at site etc., 110 mm pipes at the rate of Rs.332/- and 90 mm pipes at the rate of Rs.204/- has been sanctioned. But in the M.B. for the second item of work 140 mm pipes at the rate of Rs.481/- have been used which is not in accordance with the estimate and excess amount has been paid for the said pipes. The difference in excess rate paid that is at the rate of Rs.149/- for 140mm pipes for 2394 mtrs amounts to Rs.3,49,524/-.

ii) In the estimate, an amount of Rs.5 lakhs has been sanctioned for drilling four borewells and fixing motors near Lakshmidevi Lake. In the estimate, in respect of work item-1, sinking of borewell, the total quantity mentioned is 106, but in the M.B., the total quantity mentioned is 200+174. Therefore, the

excess amount paid is Rs.1,07,730/- (Rs.150x137=55,650+124x420= 52080).

iii) In view of the excess payment made as stated above the comments submitted by you-DGOs are not acceptable to drop the proceedings against you-DGOs.

10. Since said facts and material on record prima – facie show that you-DGOs have committed misconduct as per Rule 3(1) of KCS (Conduct) Rules, 1966, now acting u/s 12(3) of the Karnataka Lokayukta Act, recommendation is made to the Competent Authority to initiate disciplinary proceedings against you-DGOs and to entrust the inquiry to this Authority under Rule 14-A of the Karnataka Civil Services (Classification, Control and Appeal) Rules, 1957. In turn Competent Authority initiated disciplinary proceedings against you-DGOs and entrusted the Enquiry to this institution vide Reference No-1 and Hon'ble Upalokayukta nominated this enquiry Authority, to

conduct enquiry and report vide reference No.2. Hence, this charge.

11. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ-1 ಮತ್ತು 2 ರವರುಗಳಿಗೆ ಕಳುಹಿಸಿದ್ದು, ದೋಷಾರೋಪಣೆ ಪಟ್ಟಿಯು ಜಾರಿಯಾದ ನಂತರ ಆ.ಸ.ನೌ-1 ಮತ್ತು 2 ರವರುಗಳು ದಿನಾಂಕ : 16/02/2018 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11(9) ಕೆ.ಸಿ.ಎಸ್. (ಸಿಸಿಎ) ರೂಲ್ಸ್ 1957 ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ-1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

12. ಆ.ಸ.ನೌ-1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

13. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ-1 ಮತ್ತು 2 ರವರುಗಳು ತಮ್ಮ ಪರವಾಗಿ ದಿನಾಂಕ : 16/11/2018 ರಂದು ಜಂಟಿಯಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಆ.ಸ.ನೌ-1 ಮತ್ತು 2 ರವರುಗಳು ಸದರಿ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ.

14. ಈ ವಿಚಾರಣೆಯಲ್ಲಿ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ರಾಜೇಶ್ ಬಿನ್ ಮಂಗಳೇಶಪ್ಪ ಚಿನ್ನೂರ್ (ದೂರುದಾರರ) ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-3 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ನಂತರ, ಆ.ಸ.ನೌ-1 ಮತ್ತು 2

ರವರುಗಳ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಅನ್ನು ಪಡೆದುಕೊಳ್ಳಲಾಗಿರುತ್ತದೆ.

15. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ-1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

16. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

17. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ-1) ನಕಾರಾತ್ಮಕವಾಗಿದೆ.**

**ಅಂಶ-2) ಅಂತಿಮ ಆದೇಶದಂತೆ.**

## <u>ಕಾರಣಗಳು</u>

18. **ಅಂಶ-1:** ಈ ಪ್ರಕರಣದಲ್ಲಿ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ರಾಜೇಶ್ ಬಿನ್ ಮಂಗಳೇಶಪ್ಪ ಚಿನ್ನೂರ್ (ದೂರುದಾರರ) ರವರನ್ನು

ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-3 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

19. ದೂರುದಾರ ಪಿಡಬ್ಲ್ಯೂ-1 ಶ್ರೀ ರಾಜೇಶ್ ಬಿನ್ ಮಂಗಳೇಶಪ್ಪ ಚಿನ್ನೂರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆ.ಸ.ನೌ-1 ರವರು ಪಟ್ಟಣ ಪಂಚಾಯತಿಯ ಅಧಿಕಾರಿಗಳು, ಆ.ಸ.ನೌ-2 ರವರು ಪಂಚಾಯಿತಿಯ ಅಧಿಕಾರಿಯಾಗಿದ್ದು, ಆದರೆ ಅವರು ಏನು ಹುದ್ದೆಯಲ್ಲಿದ್ದಾರೆಂಬುದು ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ನಮ್ಮ ವಾರ್ಡಿನ ಕೆಲವು ಹುಡುಗರು ಬಂದು ಪೈಪ್‌ಲೈನ್ ಕೆಲಸದಲ್ಲಿ ವಾರ್ಡಿನ ಮೆಂಬರ್ ಆದ ಮಂಜುನಾಥ್ ಗಡಾದ್ ಇವರು ಕೆಲಸ ಸರಿ ಮಾಡಿಸಿಲ್ಲ. ಆದ್ದರಿಂದ ಅವರ ಮೇಲೆ ದೂರು ಕೊಡಬೇಕು ಎಂದು ಕೆಲವು ಕಾಗದಗಳ ಮೇಲೆ ಬರೆದುಕೊಂಡು ಬಂದು ನನ್ನ ಸಹಿ ಪಡೆದರು ಎಂದು ನುಡಿದು ನಿ.ಪಿ-1 ರಿಂದ 3 ರಲ್ಲಿರುವ ತನ್ನ ಸಹಿಗಳನ್ನು ಗುರುತಿಸಿದ್ದಾರೆ. ಸದರಿ ಸಹಿಗಳನ್ನು ನಿ.ಪಿ-1(ಎ) ಮತ್ತು 1(ಬಿ), ನಿ.ಪಿ-2(ಎ) ಮತ್ತು ನಿ.ಪಿ-3(ಎ) ಆಗಿರುತ್ತವೆ. ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ಇವರು ಸಾಕ್ಷ್ಯ ನುಡಿದಿರುವುದರಿಂದ ಮತ್ತು ನಿ.ಪಿ-1 ರಿಂದ 3 ರಲ್ಲಿಯ ವಿಷಯಗಳಿಗೆ ಪೂರಕವಾಗಿ ಸಾಕ್ಷಿ ನುಡಿಯದೇ ಪ್ರತಿಕೂಲ ಸಾಕ್ಷಿಯಾಗಿ ನುಡಿದಿರುತ್ತಾರೆ. ಈ ಸಾಕ್ಷಿಯನ್ನು ಮಂಡನಾಧಿಕಾರಿಗಳು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ ಯಾವುದೇ ಪೂರಕವಾದ ಸಾಕ್ಷ್ಯವನ್ನು ನೀಡಿರುವುದಿಲ್ಲ. ಈ ಸಾಕ್ಷಿದಾರರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ರವರ ಆಮಿಷಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದನ್ನು ನಿರಾಕರಿಸಿರುತ್ತಾರೆ. ಈ ಸಾಕ್ಷಿದಾರರ ಹೇಳಿಕೆಯು ಆ.ಸ.ನೌ ರವರ ಕರ್ತವ್ಯ ಲೋಪ ಮತ್ತು ದುರ್ನಡತೆಯನ್ನು ರುಜುವಾತು ಪಡಿಸುವಲ್ಲಿ ಸಹಾಯಕಕಾರಿಯಾಗಿರುವುದಿಲ್ಲ. ಈ ಸಾಕ್ಷಿಯನ್ನು ಹೊರತುಪಡಿಸಿ ಆ.ಸ.ನೌ-1 ಮತ್ತು 2 ರವರುಗಳ ಮೇಲೆ ಹೊರಿಸಲಾದ ಆಪಾದನೆಯನ್ನು ರುಜುವಾತು ಪಡಿಸಲು ಯಾವುದೇ ಬೇರೆ

ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## ವಿಚಾರಣಾ ವರದಿ

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರುಗಳಾದ 1) ಶ್ರೀ. ಮಹೇಶ್ ಬಿ. ನಿಡುಸೊಶಿ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತಿ, ಕನಕಗಿರಿ, ಕೊಪ್ಪಳ ಜಿಲ್ಲೆ ಮತ್ತು 2) ಶ್ರೀ ಸಿದ್ದಪ್ಪ, ಕಿರಿಯ ಅಭಿಯಂತರರು, ಪಟ್ಟಣ ಪಂಚಾಯತಿ, ಕನಕಗಿರಿ, ಕೊಪ್ಪಳ ಜಿಲ್ಲೆ ರವರುಗಳ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಗೊಳಿಸುವಲ್ಲಿ ವಿಫಲವಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

24/8/21

**(ಜಗದೀಶ್ವರ ಎಂ)**
(ಪ್ರಭಾರ) ಅಪರ ನಿಬಂಧಕರು ವಿಚಾರಣೆಗಳು–13,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| |
|---|
| **Witness examined on behalf of the Disciplinary Authority** |
| **PW-1:** Sri. Rajesh Chinnur (Original) |
| **Witness examined on behalf of the Defence** |
| **NIL** |
| **Documents marked on behalf of the Disciplinary Authority** |
| **Ex. P-1**: Form No-I (Original)<br>**Ex. P-1(a):** Signature of the complainant.<br>**Ex. P-1(b):** Signature of the complainant. |
| **Ex. P-2:** Form No-II (Original)<br>**Ex. P-2(a):** Signature of the complainant. |
| **Ex.P-3 :** Complaint (Original) |

**Dated this the 24th day of August 2021**

24/8/21

**(Jagadeeshwara M)**
(I/c) Additional Registrar Enquiries-13
Karnataka Lokayukta
Bangalore.